ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	**783**
ಸದಸ್ಯರ ಹೆಸರು	**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸುವ ದಿನಾಂಕ:	**26-07-2019**
ಉತ್ತರಿಸುವ ಸಚಿವರು:	**ಲೋಕೋಪಯೋಗಿ ಸಚಿವರು**

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಹೆಗ್ಗಡದೇವನಕೋಟೆ ಹ್ಯಾಂಡ್‌ಪೋಸ್ಟ್- ಎನ್.ಬೇಗೂರು ರಸ್ತೆ, ಸರಗೂರು ಬಿದರಹಳ್ಳಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಭಾಗಶಃ ದುಸ್ಥಿತಿಯಲ್ಲಿರುವುದು
ಆ)	ಹೆಚ್ಚು ಸಾರ್ವಜನಿಕ ವಾಹನಗಳ ಓಡಾಟ ಇರುವ ಈ ರಸ್ತೆಗಳನ್ನು ಕೂಡಲೇ ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; ಈ ರಸ್ತೆಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಅನುದಾನ ಒದಗಿಸಲಾಗಿದೆಯೇ? ಹಾಗಿದ್ದಲ್ಲಿ (ವಿವರಗಳನ್ನು ನೀಡುವುದು)	• ಹೆಗ್ಗಡದೇವನಕೋಟೆ ಹ್ಯಾಂಡ್‌ಪೋಸ್ಟ್‌ನಿಂದ ಎನ್-ಬೇಗೂರ್‌ವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ರಾಮನಾಥಪುರ-ತೆರಕಣಾಂಬಿ (ರಾಜ್ಯ ಹೆದ್ದಾರಿ-86) ಹ್ಯಾಂಡ್ ಪೋಸ್ಟ್ ಸರಪಳಿ (84.69 ರಿಂದ 94.60 ಕಿ.ಮೀ) ನಿಂದ ಸರಗೂರಿನವರೆಗೆ ಮತ್ತು ಸರಗೂರಿನಿಂದ ಬಿದರಹಳ್ಳಿ ಸರ್ಕಲ್ ಮಾರ್ಗ ಎನ್ ಬೇಗೂರ್‌ಗೆ (ಸರಪಳಿ 0.00 ರಿಂದ 7.00 ಕಿ.ಮೀ) ಸಂಪರ್ಕ ಕಲ್ಪಿಸುವ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. • ರಾಮನಾಥಪುರ-ತೆರಕಣಾಂಬಿ ರಸ್ತೆಯ ಹೆಚ್.ಡಿ.ಕೋಟೆ ಹ್ಯಾಂಡ್ ಪೋಸ್ಟ್‌ನಿಂದ ಸರಗೂರುವರೆಗಿನ ರಾಜ್ಯ ಹೆದ್ದಾರಿಯ 9.91 ಕಿ.ಮೀ ರಸ್ತೆಯು (84.69 ರಿಂದ 94.60 ಕಿ.ಮೀ) ಸುಸ್ಥಿತಿಯಲ್ಲಿರುತ್ತದೆ. • ಸರಗೂರುನಿಂದ ಬಿದರಹಳ್ಳಿವರೆಗಿನ ರಸ್ತೆಯು ಸರಪಳಿ 0.00 ರಿಂದ 7.00 ಕಿ.ಮೀ ವರೆಗೆ ಒಟ್ಟು 7.00ಕಿಮೀ. ಉದ್ದವಿರುತ್ತದೆ. ಇದರಲ್ಲಿ ◦ ಸರಪಳಿ 0.00 ರಿಂದ 0.75 ಕಿ.ಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ ◦ ಸರಪಳಿ 0.75 ರಿಂದ 1.60 ಕಿ.ಮೀ.ವರೆಗೆ ರಸ್ತೆಯು ಹಾಳಾಗಿದ್ದು, ಅಭಿವೃದ್ಧಿಪಡಿಸಬೇಕಾಗಿರುತ್ತದೆ. ◦ ಸರಪಳಿ 1.60 ರಿಂದ 4.25ಕಿ.ಮೀ.ವರೆಗೆ 2018-19ನೇ ಸಾಲಿನ ಅಪೆಂಡಿಕ್ಸ್-ಇ ಯೋಜನೆಯಡಿ ರೂ.310.00ಲಕ್ಷಗಳಿಗೆ ಅನುದಾನ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರ್ಯಾದೇಶವನ್ನು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
		ನೀಡಲಾಗಿರುತ್ತದೆ. • ಸರಪಳಿ 4.25 ನಿಂದ 7.00 ಕಿ.ಮೀ ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ • ಬಿದರಹಳ್ಳಿ ವೃತ್ತದಿಂದ ಎನ್.ಬೇಗೂರುವರೆಗಿನ ರಸ್ತೆಯು ಸರಪಳಿ 0.00 ರಿಂದ 13.00 ಕಿ.ಮೀ ವರೆಗೆ ಒಟ್ಟು 13.00ಕಿ.ಮೀ. ಉದ್ದವಿರುತ್ತದೆ. ಇದರಲ್ಲಿ • ಸರಪಳಿ 0.00 ರಿಂದ 1.30ಕಿ.ಮೀ.ವರೆಗಿನ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ. • ಸರಪಳಿ 1.30 ರಿಂದ 8.20 ಕಿ.ಮೀ.ವರೆಗೆ, 9.60 ರಿಂದ 11.50 ಕಿ.ಮೀ.ವರೆಗೆ ಮತ್ತು 12.00 ರಿಂದ 13.00 ಕಿ.ಮೀ.ವರೆಗೆ ಒಟ್ಟು 9.80 ಕಿ.ಮೀ. ಉದ್ದದ ರಸ್ತೆಯನ್ನು ಎಸ್.ಹೆಚ್.ಡಿ.ಪಿ. ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ • ಸರಪಳಿ 8.20 ರಿಂದ 9.60 ರವರೆಗೆ ಹಾಗೂ ಸರಪಳಿ 11.50 ರಿಂದ 12.00ಕಿ.ಮೀ.ವರೆಗೆ ಒಟ್ಟು 1.90ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು 2018-19ನೇ ಸಾಲಿನ ಅಪೆಂಡಿಕ್ಸ್-ಇ ಯೋಜನೆಯಡಿ ರೂ.200.00 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು (ಬದಲಿ ಕಾಮಗಾರಿ), ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿರುತ್ತದೆ.

ಲೋಇ 23 ಸಿಕ್ಯೂಎನ್ 2019(ಇ)

(ಗೋವಿಂದ ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು